ಒ ಎಸ್ 48/2014 ಪಿ.ಡಬ್ಲ್ಯೂ:1

ಇಂದು ದಿ: 09.02.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಂ ಸಿ ಡಿ ಕೆ ವಕೀಲರಿಂದ:

ನನಗೆ ಗೊತ್ತಿದ್ದಂತೆ ಒಂದು ಊರಿನಲ್ಲಿ ಒಂದು ಹೆಸರಿನ ಇಬ್ಬರು ಅಥವಾ 3 ಜನ ಇರುತ್ತಾರೆ ಎಂದರೆ ಸರಿ. ಚಿಕ್ಕದಾಸಯ್ಯನ ತಾತನ ಹೆಸರು ಗೊತ್ತಿಲ್ಲ. ಸಂಬಂಧಪಟ್ಟ ದಾಖಲೆಯನ್ನು ಖುದ್ದಾಗಿ ಪಡೆದುಕೊಂಡ ದಾಖಲೆಗಳಾಗಿರುತ್ತವೆ. ಸದರಿ ನಿಪಿ 23 ಅನ್ನು 2005ರ ನಂತರ ತೆಗೆದುಕೊಂಡೆ. ಸಾಕ್ಷಿಯು ಮುಂದುವರೆದು 1998ರಲ್ಲಿ ಪಡೆದುಕೊಂಡೆ ಎನ್ನುತ್ತಾರೆ. ನಿಪಿ 23 ರಲ್ಲಿ ತೋರಿಸಿದ ವ್ಯಕ್ತಿಗೂ ನನಗೂ ಸಂಬಂದ ಇಲ್ಲದ ಕಾರಣ ಅದನ್ನು ಯಾವಾಗ ಪಡೆದುಕೊಂಡೆ ಎಂಬ ನಿಖರ ಮಾಹಿತಿ ನನ್ನಲ್ಲಿ ಇಲ್ಲ ಎಂದರೆ ಸರಿಯಲ್ಲ. ಮೃತ ಮಾದಮ್ಮ ಮತ್ತು ಮೊಳ್ಳೇಗೌಡನಿಗೆ ಮಕ್ಕಳು ಇಲ್ಲದಿದ್ದರೂ ಸಹ ಚಿಕ್ಕದಾಸಯ್ಯ ಅವರ ಮಗ ಎಂದು ತೋರಿಸಲು ಸುಳ್ಳು ದಾಖಲೆ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಮೊಳ್ಳಯ್ಯನವರು ಮೃತ ಮಾದಮ್ಮನ ಪತಿಯಲ್ಲ ಎಂದರೆ ಸರಿಯಲ್ಲ. ಮೊಳ್ಳಯ್ಯ ಎನ್ನುವವರು ಇಲ್ಲದಿದ್ದರೂ ಸಹ ಯಾವುದೋ ವ್ಯಕ್ತಿಗೆ ಸಂಬಂಧ ಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ 27 ರಿಂದ 29 ರ ದಾಖಲೆಗಳಲ್ಲಿ ಏನು ಅಂಶಗಳಿವೆ ಎಂದು ನನಗೆ ಖುದ್ದಾಗಿ ಮಾಹಿತಿಗಳು ಇವೆ. ನಿಪಿ 27 ರಿಂದ 29ರಲ್ಲಿ 28 ಗುಂಟೆ ಜಮೀನು ರಾಮಶೆಟ್ಟಿಗೆ ಆಗಿದ್ದು ಎಂ ಆರ್ ಸಂ. 17/85-86ರಂತೆ ಆಗಿದ್ದು ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಅವರಿಗೆ ಆಗಿದ್ದ ಕ್ರಯ ಪತ್ರವನ್ನು ಈ ದಾವೆಯಲ್ಲಿ ಮಾತ್ರ ಪ್ರಶ್ನೆ ಮಾಡಿದ್ದೇನೆ ಹೊರತು ಬೇರೆ ದಾವೆ ಹಾಕಿಲ್ಲ. ರಾಮಶೆಟ್ಟಿಗೆ ಕ್ರಯ ಆದ ಬಗ್ಗೆ ವಕೀಲರಿಗೆ ದಾವೆ ಸಲ್ಲಿಸುವಾಗ ಮಾಹಿತಿ ನೀಡಿದ್ದೇನೆ. ನಿಪಿ 27 ರಿಂದ 29ರಲ್ಲಿ ಮಾದಮ್ಮ ಬಿನ್ ಬುಂಡಯ್ಯ ಎಂದು ನಮೂದಾಗಿರುವುದು ತಪ್ಪು ನಮೂದಾಗಿದ್ದು ನಾನು ಲಾಭಾಂಶ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಮಾದಮ್ಮ ಕೋಂ ಪುಟ್ಟಮಾದಯ್ಯ ಉರುಫ್ ಬುಂಡಯ್ಯನ ಪುಟ್ಟಮಾದಯ್ಯ ಎಂದು ನಮೂದಾಗಬೇಕಾಗಿತ್ತು ಆದರೆ ಅದು ತಪ್ಪು ನಮೂದಾಗಿದೆ ಎಂದರೆ ಸರಿಯಲ್ಲ. ಮಾದಮ್ಮನ ಗಂಡನ ಹೆಸರು ಪುಟ್ಟ ಮಾದಯ್ಯ ಅಲಿಯಾಸ್ ಪುಟ್ಟಮಾದಯ್ಯನ ಬುಂಡಯ್ಯ ಎಂದರೆ ಸರಿಯಲ್ಲ. ಮಾದಮ್ಮ ಬುಂಡಯ್ಯನ ಮೊದಲನೆ ಮಗನಾದ ಪುಟ್ಟಮಾದಯ್ಯ ಉರುಫ್ ಬುಂಡಯ್ಯನ ಪುಟ್ಟಮಾದಯ್ಯ ನ ಹೆಂಡತಿ ಎಂದರೆ ಸರಿಯಲ್ಲ. ಸಂಬಂದಪಟ್ಟ ಕಂದಾಯ ಅಧಿಕಾರಿಗಳು ಮಾಡಿದ ತಪ್ಪಿನ ಲಾಭ ಪಡೆಯಲು ನಾನು ಪ್ರಯತ್ನ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಿಪಿ 30ರ ಪಟ್ಟಾ ಮತ್ತು ರಶೀದಿ ಪುಸ್ತಕ ಯಾವ ಸರ್ವೆ ನಂಬರ್ ಮತ್ತು ಯಾರಿಗೆ ಸಂಬಂಧಿಸಿದ್ದು ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ತೋರಿಸಿರುವ ದಾವಾ ಆಸ್ತಿಗೂ ಪಟ್ಟಾ ಪುಸ್ತಕಕ್ಕೂ

ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ 31ರ ಕಟ್ಟಡ ಲೈಸನ್ಸ್ ನಲ್ಲಿ ನಮೂದಾಗಿರುವ ನಿವೇಶನ ಸಂಖ್ಯೆ 42 ಮೃತ ಚಿಕ್ಕದಾಸನಿಗೆ ಸಂಬಂದಿಸಿದ್ದು ಎಂದು ತೋರಿಸಲು ನನ್ನ ಬಳಿ ಇದೆ, ಆದರೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಚಿಕ್ಕದಾಸಯ್ಯನಿಗೆ ಬಂದ ನಿವೇಶನ ಸಂಖ್ಯೆ 42 ಮಂಜೂರಾದ ಆಸ್ತಿಯಾಗಿರುತ್ತದೆ. ಆ ಕಾರಣ ನ್ಯಾಯಾಲಯಕ್ಕೆ ಸಂಬಂಧಪಟ್ಟ ದಾಖಲೆ ಕೊಡಲು ತೊಂದರೆ ಇಲ್ಲ. ನಿವೇಶನ 42 ಅನ್ನು ನಾನು ಸಂಬಂದಪಟ್ಟ ಇಲಾಖೆಯಿಂದ ಪಡೆದುಕೊಂಡಿರುತ್ತೇನೆ. ಆದರೆ ಷ್ಟು ವರ್ಷಗಳ ಹಿಂದೆ ಪಡೆದುಕೊಂಡೆ ಎಂದು ಗೊತ್ತಿಲ್ಲ. ನಿವೇಶನಕ್ಕೆ ಸಂಬಂದಪಟ್ಟ ಡಿಮಾಂಡ್ ರಿಜಿಸ್ಟರ್ ಹಾಜರುಪಡಿಸಲು ತೊಂದರೆ ಇಲ್ಲ. ಮೊಳ್ಳಯ್ಯನಿಗೆ ಚಿಕ್ಕದಾಸಯ್ಯ ಎಂಬ ಮಗ ಇದ್ದ ಎಂದು ತೋರಿಸಲು ನಿಪಿ 31 ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 31 ಅನ್ನು ದಿನಾಂಕ 12.10.1980ರಂದು ತಯಾರಾದ ದಾಖಲೆಯಾಗಿದ್ದು ಆ ಸಮಯದಲ್ಲಿ ನಾನು ಹುಟ್ಟಿರಲಿಲ್ಲ ಎಂದರೆ ಸರಿಯಲ್ಲ.

ನಾನು 10ನೇ ತರಗತಿ ಓದಿದ್ದು, ಅಂಕಪಟ್ಟಿ ಇದ್ದು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಚಿಕ್ಕದಾಸಯ್ಯನ ಮಗ ರವಿ (14ನೇ ಪ್ರತಿವಾದಿ) ಮತ್ತು ನನ್ನ ನಡುವೆ ಕಳೆದ ವರ್ಷಗಳಿಂದ ಚೆನ್ನಾಗಿ ಇಲ್ಲ. ಚಿಕ್ಕದಾಸಯ್ಯನಿಗೆ ಸಂಬಂಧಪಟ್ಟ ಆಧಾರ ಕಾರ್ಡನ್ನು ಮತ್ತು ಮತದಾರರ ಗುರುತಿನ ಚೀಟಿಯನ್ನು ನ್ಯಾಯಾಲಯದಿಂದ ಪಡೆದುಕೊಂಡೆ. ಅದನ್ನು ನ್ಯಾಯಾಲಯಕ್ಕೆ 14ನೇ ಪ್ರತಿವಾದಿ ನ್ಯಾಯಾಲಯಕ್ಕೆ ಕೊಟ್ಟಿದ್ದರು. 14ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದಿಲ್ಲ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ, ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲಲ. ನಾನು ಮತ್ತು ಉಳಿಕೆ ವಾದಿಗಳು, 1 ರಿಂದ 3, 8 ರಿಂದ 15ನೇ ಪ್ರತಿವಾದಿಗಳು ಶಾಮೀಲಾಗಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಇಲ್ಲದಿರುವ ಅಂಶವನ್ನು ಸಮರ್ಥನೆ ಮಾಡಲು 14ನೇ ಪ್ರತಿವಾದಿಯ ಮನೆಯಿಂದ ನಾನೇ ದಾಖಲೆಗಳನ್ನು ಪಡೆದುಕೊಂಡು ಬಂದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು, ಉಳಿದ ವಾದಿಗಳು 1 ರಿಂದ 3, 8 ರಿಂದ 15ನೇ ಪ್ರತಿವಾದಿಗಳು ಮೃತ ಮಾದಮ್ಮ ಮತ್ತು ಮೊಳ್ಳಯ್ಯನ ವಂಶಸ್ಥರಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.